# ಪ್ರಮೀಳಾ ರಾಜ್ಯದಲ್ಲಿ..!



ಬಾಲಿವುಡ್‌ನಲ್ಲಿ ಸದ್ಯಕ್ಕೆ ಪ್ರಮೀಳಾ ರಾಜ್ಯ. ಎರಡು ವಾರಗಳ ಹಿಂದೆ ವಿದ್ಯಾ ಬಾಲನ್ ಅಭಿನಯದ 'ಬೇಗಂ ಜಾನ್' ತೆರೆಗೆ ಬಂತು. ಕಳೆದ ವಾರ ಸೋನಾಕ್ಷಿ ಅಭಿನಯದ 'ನೂರ್' ಮತ್ತು ರವೀನಾ ಟಂಡನ್ ಅಭಿನಯದ 'ಮಾತ್ರ್' ಪರಸ್ಪರ ಸ್ಪರ್ಧೆಗಳಿಯಿತು. ಹೀರೋಯಿನ್‌ಗಳನ್ನೇ ಕೇಂದ್ರವಾಗಿಟ್ಟುಕೊಂಡು ಹೀಗೆ ಹಿಂದಿ ಸಿನಿಮಾಗಳು ತೆರೆಗೆ ಬರುತ್ತಿರುವುದು ಹೀರೋಗಳಿಗೆ ಒಂದರ್ಥದಲ್ಲಿ ಸೆಡ್ಡು ಹೊಡೆದಂತೆಯೇ. ಕೇವಲ ಹೀರೋಯಿನ್‌ಗಳನ್ನು ನಂಬಿಕೊಂಡು ಸಿನಿಮಾಗೆ ಹಣ ಹೂಡಬಹುದು ಎಂದು ನಿರ್ಮಾಪಕರಿಗೆ ಅನ್ನಿಸುತ್ತಿರುವುದು ಈ ದಿನಗಳಲ್ಲಿ ವಿಶೇಷವೇ.



'ಬೇಗಂ ಜಾನ್' ಕಥೆಗೆ ಐತಿಹಾಸಿಕ ಹಿನ್ನೆಲೆ ಇದೆ ಎಂದಿದ್ದರೂ ಅದರ ನಿರೂಪಣೆ ಸಮಕಾಲೀನವಾಗಿಯೇ ಇದೆ. ಭಾರತ–ಪಾಕಿಸ್ತಾನ ಗಡಿಯಲ್ಲಿ ವೇಶ್ಯಾವಾಟಿಕೆಯ ಕೇಂದ್ರ ನಡೆಸುತ್ತಿದ್ದ ನಾಯಕಸಾನಿಯೊಬ್ಬಳ ಕಥೆ. ಎಂದಿನಂತೆ ವಿದ್ಯಾ ಅದ್ಭುತ ಅಭಿನಯ ನೀಡಿದ್ದರೂ, ಬಾಕ್ಸಾಫೀಸ್ ಕಲೆಕ್ಷನ್ ಹೇಳುವಂತಿಲ್ಲ. 'ನೂರ್'ನಲ್ಲಿ ಸೋನಾಕ್ಷಿ ಯದ್ದು ಪತ್ರಕರ್ತೆಯ ಪಾತ್ರ. ಆದರೆ ಕಥೆ ಜಾಳುಜಾಳಾಗಿರುವುದು ಕಲೆಕ್ಷನ್‌ಗೆ ಕೊಕ್ಕೆ ಹಾಕಿದಂತಿದೆ. ಸೋನಾಕ್ಷಿ ಅಭಿಮಾನಿಗಳಿಗೆ ಚಿತ್ರ ಮುದ ನೀಡಿದೆಯಾದರೂ, ಒಟ್ಟಾರೆ ಜನರ ಪ್ರತಿಕ್ರಿಯೆ ಹೇಳಿಕೊಳ್ಳುವಂತಿಲ್ಲ.



ಬಹಳ ವರ್ಷಗಳ ಬಳಿಕ ತೆರೆಯ ಮೇಲೆ ಕಾಣಿಸಿಕೊಂಡಿರುವ ರವೀನಾ ಟಂಡನ್‌ಳದ್ದು ಇನ್ನೂ ದಯನೀಯ ಕಥೆ. ಹೆಣ್ಣೊಬ್ಬಳ ಮೇಲಿನ ಅತ್ಯಾಚಾರ ಮತ್ತು ಪ್ರತೀಕಾರದ ಕಥೆ. ರವೀನಾ ಮುಖವನ್ನು ಪ್ರೇಕ್ಷಕರು ಮರೆತೇ ಹೋದಂತಿದೆ. ಈ ಚಿತ್ರ ಬಾಕ್ಸಾಫೀಸಿನಲ್ಲಿ ಮಕಾಡೆ ಮಲಗಿದ ವರದಿ ಬಂದಿದೆ.

ಅಂದ ಹಾಗೆ, ಕಳೆದ 2–3 ವರ್ಷಗಳಿಂದ ಸೋನಾಕ್ಷಿ ಅಭಿನಯದ ಚಿತ್ರವೊಂದಕ್ಕೆ ಅಭಿಮಾನಿಗಳು ಕಾದು ಕುಳಿತೇ ಇದ್ದಾರೆ. ಬಾಲಿವುಡ್‌ನ ಅದ್ಭುತ ಸುಂದರಿ ನಟಿ ಮೀನಾಕುಮಾರಿ ಮತ್ತು ಕಿಶೋರ್ ಕುಮಾರ್ ಪ್ರೇಮಕಥೆಯ '1969– 2017' ಎಂಬ ಸಿನಿಮಾ. ಅನುರಾಗ್ ಬಸು ನಿರ್ದೇಶನದ ಈ ಚಿತ್ರದಲ್ಲಿ ಸೋನಾಕ್ಷಿ ಮತ್ತು ರಣಬೀರ್ ಜೋಡಿ. ಚಿತ್ರದ ಟ್ರೇಲರ್ ನೋಡಿದವರೆಲ್ಲ ಬೆರಗಾಗಿದ್ದರು. 2017ರಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂಬ ಸುದ್ದಿ ಹಬ್ಬಿತ್ತು. ಆದರೆ 2017ರ ಮೊದಲ ಮೂರು ತಿಂಗಳು ಉರುಳಿದರೂ ಚಿತ್ರದ ಸುದ್ದಿಯೇ ಇಲ್ಲ!

ಹಾಗೆಂದು ಸೋನಾಕ್ಷಿ ಗೆ ಪುರುಸೊತ್ತಿದೆ ಎಂದಲ್ಲ. ಕೈತುಂಬ ಕೆಲಸವಿದೆ. ನೂರ್ ಬೆನ್ನಲ್ಲೇ 'ನಮಸ್ತೆ ಇಂಗ್ಲೆಂಡ್' ಸಿದ್ಧವಾಗುತ್ತಿದೆ. 'ಇತ್ತೆಫಾಕ್' ರಿಮೇಕ್ ನಡೆದಿದೆ. 2018ಕ್ಕೆ 'ದಭಾಂಗ್ 3' ಬರಬೇಕಿದೆ.

■ ಬಿಂದು